Mis. No. **1** / 2019

ಪಿ ಡಬ್ಲ್ಯೂ**1**

ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ದಿಃ **17-12-2020.**

**ಪಾಟೀ ಸವಾಲುಃ- ಜಿ ಎನ್ ಆರ್** ವಕೀಲರಿಂದ

ನನ್ನ ತಂದೆಗೆ ಮೂರು ಜನ ಹೆಂಡತಿಯರು . ಮೂರು ಹೆಂಡತಿಯರಿಗೆ ಒಟ್ಟು ಹನ್ನೆರಡು ಜನ ಮಕ್ಕಳು. ನಾನು ನನ ತಂದೆ ಒಟ್ಟಾಗಿ ವಾಸವಾಗಿದ್ದೇವೆ . ನಾನು ಮತ್ತು ನನ್ನ ತಂದೆ ಬದ್ದಿಕೆರೆ ಯಲ್ಲಿ ವಾಸವಾಗಿದ್ದೇವೆಂದರೆ ಸಾಕ್ಷಿಯು ನನ್ನ ತಂದೆ ಊರಿನಲ್ಲಿ ವಾಸವಾಗಿದ್ದು ನಾವುಗಳು ಬೆಂಗಳೂರಿನಲ್ಲಿ ಸುಮಾರು 10-12 ವರ್ಷಗಳಿಂದ ವಾಸವಾಗಿರುತ್ತೇವೆಂದು ನುಡಿಯುತ್ತಾರೆ. ಈ ಸಂಬಂಧ ನ್ಯಾಯಾಲಯಕ್ಕೆ ದಾಖಲೆ ಹಾಜರುಮಾಡಿಲ್ಲ . ಸರಸ್ವತಿ ನನ್ನ ಅತ್ತಿಗೆ . ಸಾಕ್ಷಿಗೆ ನಿಪಿ-3 ನ್ನು ತೋರಿಸಲಾಗಿ ಅದರಲ್ಲಿರುವ ಸರಸ್ವತಮ್ಮ ಎಂದು ಬರೆದಿರುವ ಸಹಿ ನನ್ನ ಅತ್ತಿಗೆಯ ಸಹಿ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ಮಧ್ಯಕಾಲೀನ ಸಂಖ್ಯೆ-1 ನ್ನು ತೋರಿಸಲಾಗಿ ಅದರಲ್ಲಿರುವ ಸಹಿ ನಿಮ್ಮ ತಂದೆಯ ಸಹಿಯೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನಮ್ಮ ತಂದೆಯ ಸಹಿ ಅಲ್ಲ ಎಂದು ನುಡಿಯುತ್ತಾರೆ .

ನಾನು ಡಿಪ್ಲೊಮಾ ವ್ಯಾಸಂಗಮಾಡಿದ್ದೇನೆ ನನ್ನ ತಂದೆ ಕನ್ನಡದಲ್ಲಿ ಸಹಿ ಮಾಡುತ್ತಿದ್ದರು. ನನ್ನ ತಂದೆ ಬದ್ದಿಕೆರೆಯಲ್ಲಿಯೇ ವಾಸವಾಗಿದ್ದರು ಎಂದರೆ ಸರಿ . ನನ್ನ ತಂದೆ ಸರಸ್ವತಮ್ಮ ರವರಜೊತೆ ವಾಸವಾಗಿದ್ದರು ಎಂದರೆ ಪಕ್ಕದಲ್ಲಿ ವಾಸವಾಗಿದ್ದು ಸರಸ್ವತಮ್ಮ ಊಟ ತಿಂಡಿ ನೀಡುತ್ತಿದ್ದಳು. ನನ್ನ ತಂದೆ ವಾಸಮಾಡುತ್ತಿದ್ದ ಮನೆ ಸರಸ್ವತಮ್ಮನವರ ಮನೆಯಿಂದ ಸುಮಾರು 50 ರಿಂದ 100 ಮೀಟರ್ ಅಂತರದಲ್ಲಿದೆ . ನಮ್ಮ ಮನೆಯ ಅಕ್ಕಪಕ್ಕದಲ್ಲಿ ತಿಮ್ಮೇಗೌಡ ಮತ್ತು ಸಿದ್ದೇಗೌಡರ ಮನೆಗಳು ಇವೆ .

ನಾನು 2009 ರಲ್ಲಿ ಬೆಂಗಳೂರಿಗೆ ಹೋಗಿರುತ್ತೇನೆ . ಎದುರುದಾರರು ದಿನಾಂಕ 3-12-2011 ರಂದು ನೋಟೀಸ್ ನೀಡಿದ್ದು ಸದರಿ ನೋಟೀಸ್ ನ್ನು ನನ್ನ ಅತ್ತಿಗೆ ಸರಸ್ವತಿ ರವರು ಪಡೆದುಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಅವರಿಗೆ ಓದು ಬರಹ ಗೊತ್ತಿಲ್ಲ. ನಂತರ ನ್ಯಾಯಾಲಯದಿಂದ ನನ್ನ ತಂದೆಗೆ ನಿಪಿ-2 ರ ಪ್ರಕಾರ ನೋಟೀಸ್ ಹೋಗಿದ್ದು ಅದನ್ನು ತಿರಸ್ಕಾರ ಮಾಡಿದ್ದಾರೆ ಎಂದರೆ ಸರಿಯಲ್ಲ. ನಮ್ಮ ಊರಿನಲ್ಲಿ ಮಂಜೇಗೌಡ ಬಿನ್ ರಂಗೇಗೌಡ , ತಮ್ಮಣ್ಣಗೌಡ ಬಿನ್ ತಿಮ್ಮೇಗೌಡ ಎದುರುದಾರರ ಸಹೋದರ . ನನ್ನ ತಂದೆ ನೋಟೀಸ್ ನ್ನು ತಿರಸ್ಕಾರಮಾಡಿದ ನಂತರ ನ್ಯಾಯಾಲಯ ಎದುರುದಾರರು ಸಲ್ಲಿಸಿದ ದಾವೆಯನ್ನು ಡಿಕ್ರಿಮಾಡಿದೆ ಎಂದರೆ ಸಾಕ್ಷಿಯು ನನ್ನ ತಂದೆಗೆ ಆರೋಗ್ಯ ಸರಿಇಲ್ಲದೇ ಕೈ ಕಾಲುಗಳು ಸ್ವಾಧೀನ ಇಲ್ಲದೇ ಆನಾರೋಗ್ಯದಿಂದ ನರಳುತ್ತಿದ್ದರು ಎಂದು ನುಡಿಯುತ್ತಾರೆ . ನನ್ನ ತಂದೆ ಆನಾರೋಗ್ಯದಿಂದ ನರಳುತ್ತಿದ್ದ ಬಗ್ಗೆ ನ್ಯಾಯಾಲಯಕ್ಕೆ ದಾಖಲಾತಿ ಹಾಜರುಮಾಡಿಲ್ಲ. ನಾನು ನಮ್ಮ ಊರಿಗೆ 2-3 ವರ್ಷಕ್ಕೊಮ್ಮೆ ಬಂದು ಹೋಗುತ್ತೇನೆ . ನಾನು ಬದ್ದಿಕೆರೆ ಗ್ರಾಮದಲ್ಲಿ ವ್ಯವಸಾಯಮಾಡಿಕೊಂಡಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಮೇಲ್ಕಂಡ ದಾವೆಯ ಎಲ್ಲಾ ವ್ಯವಹಾರಗಳು ಗೊತ್ತಿದ್ದರೂ ಸಹ ಕಾಲ ಹರಣ ಮಾಡುವ ಸಲುವಾಗಿ ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮೇಲ್ಕಂಡ ದಾವೆಯ ವಸ್ತು ವಿಷಯ ಸರ್ವೆಯರ್ ರವರು ಜಮೀನು ಅಳತೆಮಾಡಲು ಬಂದಿದ್ದಾರೆ ಎಂದು ನಮ್ಮ ಪಕ್ಕದ ಜಮೀನಿನವರು ತಿಳಿಸಿದಾಗ ತಿಳಿಯಿತು . ಸದರಿ ವಿಷಯವನ್ನು ಗೋವಿಂದೇಗೌಡರ ಮಗ ಪರಮೇಶ ರವರು ತಿಳಿಸಿರುತ್ತಾರೆ . ಅವರನ್ನು ವಿಚಾರಣೆಮಾಡಲು ಯಾವುದೇ ತೊಂದರೆ ಇಲ್ಲ. ಆನಂತರ ಸುಂದರ್ ರಾಜ್ ಎಂಬ ವಕೀಲರನ್ನು ಭೇಟಿ ಮಾಡಿದಾಗ

Mis. No. **1** / 2019

**ಪಿ ಡಬ್ಲ್ಯೂ1**

ಮೇಲ್ಕಂಡವಿಚಾರ ತಿಳಿಯಿತು . ಸರ್ವೆಯರ್ ಬಂದ 10 ದಿನಗಳ ನಂತರ ವಕೀಲರನ್ನು ಭೇಟಿಮಾಡಿರುತ್ತೇನೆ . ಕಾಲ ವಿಳಂಬ ಮಾಡುವ ಸಲುವಾಗಿಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆ** - ಇಲ್ಲ

(ಮುಕ್ತ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಸ.ಇ.ಎ.ಒ.,

**(ಎಸ್.ಚಿನ್ನಸ್ವಾಮಿ)**
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಚನ್ನರಾಯಪಟ್ಟಣ.